15	ಎಮ್.ಎಮ್.ಶಾಂತಿ	ಟೈಪಿಸ್ಟ್
16	ಜಯದೇವ ಊರ್ವ	ಟೈಪಿಸ್ಟ್
17	ಬಿ.ಆರ್.ಅಮರ್‌ನಾಥ್	ಟೈಪಿಸ್ಟ್
18	ಬಿ.ಸುನಂದ	ಟೈಪಿಸ್ಟ್
19	ಟಿ.ಸಿ.ನರಸಿಂಹ	ಡ್ರೈವರ್
20	ಬಿ.ಎಮ್.ಹೇಮಂತ್‌ಕುಮಾರ್	ಡ್ರೈವರ್
21	ಮಹದೇವಯ್ಯ	ಡ್ರೈವರ್
22	ಟಿ.ಎನ್.ಜಯ್‌ರಾಮ್	ಅಟೆಂಡರ್
23	ಎಮ್.ಆರ್.ದಿಲೀಪ್	ಅಟೆಂಡರ್
24	ಎಸ್.ಶಿವಸ್ವಾಮಿ	ಅಟೆಂಡರ್
25	ಎಸ್.ಸಿ.ವಿಜಯ್‌ಕುಮಾರ್	ಅಟೆಂಡರ್
26	ಷಣ್ಮುಖಯ್ಯ	ಅಟೆಂಡರ್
27	ಎಸ್.ಆರ್.ಗೋಪಾಲ್	ಪ್ಲಂಬರ್
28	ನಾಗರಾಜ	ಸಹಾಯಕರು
29	ಮಹದೇವಮ್ಮ	ಸಹಾಯಕರು
30	ಪ್ರೇಮಾವತಿ	ಸಹಾಯಕರು
31	ಆರ್.ಮೀನಾಕ್ಷಿ	ಸಹಾಯಕರು
32	ಜಯಕುಮಾರ್	ಗ್ರೂಪ್ 'ಡಿ' ನೌಕರರು
33	ಈರಣ್ಣ	ಗ್ರೂಪ್ 'ಡಿ' ನೌಕರರು
34	ಜೆ.ಹೆಚ್.ರವಿ	ಗ್ರೂಪ್ 'ಡಿ' ನೌಕರರು
35	ಎನ್.ಸುಂದರೇಶ್	ಗ್ರೂಪ್ 'ಡಿ' ನೌಕರರು
36	ಖಲೀಮುಲ್ಲಾಖಾನ್	ಡ್ರೈವರ್

ವಿಷಯ: ವಿಜಾಪುರ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವುದು

2496 (3178)

ಶ್ರೀ ರಾಜಶೇಖರ ವಿ.ಶೀಲವಂತ (ಗುಳೇದಗುಡ್ಡ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದವರ ಮುಂದಿದೆಯೇ;

ಆ) ಹಾಗಿದ್ದಲ್ಲಿ ಗುಳೇದಗುಡ್ಡ ಮತಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ

ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಯಾವ ಯಾವ ಗ್ರಾಮಗಳಲ್ಲಿ ಪ್ರಾರಂಭಿಸಲಾಗುವುದು?

ಈ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇದೆ.

ಆ) ಬಂದಿದೆ

ಇ) ವಿಜಾಪುರ ಜಿಲ್ಲೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರು ಮಾಡಲು ಸ್ಥಳಗಳನ್ನು ಗುರ್ತಿಸಿ ಜಿಲ್ಲಾ ಪಂಚಾಯತ್ ಅನುಮೋದನೆಯೊಂದಿಗೆ ಪ್ರಸ್ತಾವನೆ ಬಂದ ನಂತರ ಸ್ಥಳಗಳ ಆಯ್ಕೆ ಬಗ್ಗೆ ತೀರ್ಮಾನಿಸಲಾಗುವುದು.

ಈ) ಉದ್ಭವಿಸುವುದಿಲ್ಲ.

ವಿಷಯ: ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಚುಚ್ಚುಮದ್ದು ನೀಡಲು ಒಂದೇ ಸಿರೇಂಜ್ ಉಪಯೋಗಿಸುತ್ತಿರುವುದು.

2497 (2198)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಕ್ಕಳಿಗೆ ಉಚಿವಾಗಿ ಡಿ.ಪಿ.ಟಿ. ಧಡಾರ, ಬಿ.ಸಿಜಿ. ಇತ್ಯಾದಿ ಚುಚ್ಚುಮದ್ದುಗಳನ್ನು ನೀಡಲಾಗುತ್ತಿದೆಯೇ?

ಆ) ಹಾಗಿದ್ದಲ್ಲಿ ಒಂದೇ ಸಿರೆಂಜ್‌ನ್ನು ಉಪಯೊಗಿಸಿ ಈ ರೀತಿ ಹಲವಾರು ಚಚ್ಚುಮದ್ದುಗಳನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಎಲ್ಲಾ ಆರೋಗ್ಯ ಕೇಂದ್ರಗಳಿಗೆ ಡಿಸ್‌ಪೋಸಬಲ್ ಸಿರೆಂಜ್ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು.

ಆ) ಇಲ್ಲ.